# ಕನ್ನಡ ಪ್ರವಾಸ ಸಾಹಿತ್ಯದಲ್ಲಿನ ಕಾವ್ಯ ಮತ್ತು ಕಥೆಯ ಸ್ವರೂಪ

ಕೇಶವ ಆರ್.[1] & ರಘು ಎಂ.[2]

[1]ಶಿಕ್ಷಕರು, ಟ್ರೀಮಿಸ್ ವರ್ಲ್ಡ್ ಸ್ಕೂಲ್, ಹುಲಿಮಂಗಲ, ಬೆಂಗಳೂರು.

[2]ಬೋಧನಾ ಸಹಾಯಕರು, ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಕ್ರೈಸ್ಟ್ ನಗರ, ಹುಲ್ಲಹಳ್ಳಿ, ಬೆಂಗಳೂರು.

DOI: https://doi.org/10.5281/zenodo.18770778

## ABSTRACT:

ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದಾದ ಪ್ರವಾಸ ಸಾಹಿತ್ಯವು ಕಾವ್ಯ ಮತ್ತು ಕಥೆಗಳ ಮೂಲಕ ವಿಶಿಷ್ಟವಾದ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ. ಪ್ರವಾಸವು ಕೇವಲ ಸ್ಥಳ ವೀಕ್ಷಣೆಯಾಗಿರದೆ, ಅದು ಆಂತರಿಕ ಹಾಗೂ ಬಾಹ್ಯ ಜಗತ್ತಿನ ಅನ್ವೇಷಣೆಯಾಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕುವೆಂಪು, ಬೇಂದ್ರೆ, ಜಿ.ಎಸ್.ಎಸ್ ಅವರ ಕಾವ್ಯಗಳಲ್ಲಿ ಪ್ರಕೃತಿ ಮತ್ತು ಭಾವನೆಗಳ ಸಮ್ಮಿಲನವಿದ್ದರೆ, ವಿ. ಸೀತಾರಾಮಯ್ಯ, ತೇಜಸ್ವಿ ಅವರಂತಹ ಲೇಖಕರ ಗದ್ಯ ಬರಹಗಳಲ್ಲಿ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಭೌಗೋಳಿಕ ವಿವರಗಳು ಕಥಾರೂಪದಲ್ಲಿ ಅನಾವರಣಗೊಂಡಿವೆ. ತೀರ್ಥಕ್ಷೇತ್ರಗಳ ದರ್ಶನ, ಪರಿಸರ ಪ್ರೇಮ ಮತ್ತು ಜನಜೀವನದ ವೈವಿಧ್ಯವನ್ನು ಪರಿಚಯಿಸುವಲ್ಲಿ ಈ ಸಾಹಿತ್ಯ ಪ್ರಕಾರವು ಮಹತ್ವದ ಪಾತ್ರ ವಹಿಸುತ್ತದೆ. ಓದುಗರಿಗೆ ಮಾಹಿತಿ ಮತ್ತು ಸೌಂದರ್ಯಾನುಭವವನ್ನು ಏಕಕಾಲದಲ್ಲಿ ನೀಡುವ ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಇಲ್ಲಿ ಗುರುತಿಸಲಾಗಿದೆ.

## KEYWORDS:

ಪ್ರವಾಸ ಸಾಹಿತ್ಯ, ಕಾವ್ಯ ಮತ್ತು ಕಥೆ, ಸಾಂಸ್ಕೃತಿಕ ಶೋಧ, ತೀರ್ಥಕ್ಷೇತ್ರ, ಪ್ರಕೃತಿ ಸೌಂದರ್ಯ.

**ಅರ್ಥ ಮತ್ತು ಸ್ವರೂಪ:**

ಕನ್ನಡ ಸಾಹಿತ್ಯವು ಸಮೃದ್ಧವಾಗಿ ಬೆಳೆದು ನಿಂತ ಒಂದು ಬೃಹತ್ ಮರದಂತೆ; ಆಳಕ್ಕೆ ಎಷ್ಟು ಬೇರುಗಳಿರುತ್ತವೆಯೋ, ಮೇಲಕ್ಕೆ ಎಷ್ಟು ಎತ್ತರವಿರುತ್ತದೆಯೋ, ಹಾಗೆಯೇ ಕವಲೊಡೆದು ಕೊಂಬೆಗಳಂತೆ ಹರಡಿಕೊಂಡಿರುವಂತೆ ನಮ್ಮ ಕನ್ನಡ ಸಾಹಿತ್ಯವೂ ಬಹಳ ಆಳವಾಗಿ ಬೇರೂರಿರುವ, ಎತ್ತರಕ್ಕೆ ಬೆಳೆದಿರುವ, ಅಗಲದಲ್ಲಿ ಬಹಳ ವಿಸ್ತಾರತೆಯನ್ನು ಒಳಗೊಂಡಿದೆ. ಈ ಕನ್ನಡಕ್ಕೆ ಇಷ್ಟೊಂದು ಶ್ರೀಮಂತಿಕೆ ಬರಲು ಮುಖ್ಯವಾದ ಕಾರಣವೇನೆಂದರೆ, ಅದರಲ್ಲಿನ ಪ್ರಕಾರಗಳೇ ಆಗಿವೆ ಎಂದರೆ ತಪ್ಪಾಗಲಾರದು.

ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಆತ್ಮಚರಿತ್ರೆ, ಆತ್ಮಕಥೆಯಂತೆಯೇ ಪ್ರವಾಸ ಸಾಹಿತ್ಯವು ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ಇದು ಯಾತ್ರೆಯಿಂದ ಪ್ರಾರಂಭವಾಗಿ ಮನೋರಂಜನೆಯ ಘಟ್ಟವನ್ನು ತಲುಪಿದೆ. ಈ ಸಾಹಿತ್ಯದಲ್ಲಿ ಕಾವ್ಯ ಮತ್ತು ಕಥೆಗಳು ಹೇಗೆ ನಿರೂಪಣೆಯನ್ನು ಮಾಡಿವೆ ಎಂಬುದೇ ಈ ನನ್ನ ಲೇಖನದ ಉದ್ದೇಶವಾಗಿದೆ.

ಪ್ರವಾಸ ಎಂಬ ಪದಕ್ಕೆ ಕನ್ನಡದಲ್ಲಿ ಹಲವು ಸಮಾನಾರ್ಥಕ ಪದಗಳನ್ನು ನೋಡಬಹುದಾಗಿದೆ. ಪ್ರದಕ್ಷಿಣೆ, ಪರ್ಯಟನೆ, ಪ್ರಯಾಣ, ಯಾತ್ರೆ, ಸುತ್ತಾಟ, ಸಂಚಾರ ಹೀಗೆ ಅನೇಕ ಪದಗಳನ್ನು ಬಳಸುತ್ತಿದ್ದಾರೆ. ಪ್ರವಾಸ ಎಂಬ ಪದವು ಸಂಸ್ಕೃತ ಪದವಾಗಿದ್ದು, ಆಂಗ್ಲಭಾಷೆಯಲ್ಲಿ ಇದಕ್ಕೆ Travel ಎಂದು ಕರೆಯಲಾಗಿದೆ. ಪ್ರವಾಸ (Pravasa): Sojourning Abroad, Foreign Residence, Being away from home, a temporary sojourn, a foreign abode ಎಂದು Kittel ಕನ್ನಡ–ಇಂಗ್ಲೀಷ್ ನಿಘಂಟು ಹೇಳುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರವಾಸ ಪದಕ್ಕೆ 'ಪರಸ್ಥಳಕ್ಕೆ ಹೋಗುವುದು', 'ಪರಸ್ಥಳ ಪ್ರಯಾಣ ಮಾಡುವುದು' ಎಂದಿದೆ.

ಫ್ರಾನ್ಸಿಸ್ ಬೇಕನ್ ಎಂಬುವನು ತನ್ನ ಪ್ರಬಂಧವೊಂದರಲ್ಲಿ ಪ್ರವಾಸವನ್ನು ಕುರಿತು ಹೀಗೆ ಹೇಳಿದ್ದಾರೆ: "In the younger sort, is a part of education, in the elder sort, a part of Experience" (ಪ್ರವಾಸವು ಯುವಕರಿಗೆ ಶಿಕ್ಷಣದ ಒಂದು ಭಾಗ; ಹಿರಿಯರಿಗೆ ಅದು ಅನುಭವದ ಒಂದು ಭಾಗ).

**ಪ್ರವಾಸ ಸಾಹಿತ್ಯದ ರೂಪವನ್ನು ಆಧರಿಸಿ ವರದರಾಜ ಹುಯಿಲಗೋಳರು ಮೂರು ಪ್ರಕಾರವಾಗಿ ವಿಂಗಡಿಸುತ್ತಾರೆ:**

1. ಪತ್ರರೂಪದ ಪ್ರವಾಸ ಸಾಹಿತ್ಯ.
2. ದಿನಚರಿ ಪ್ರವಾಸ ಸಾಹಿತ್ಯ.
3. ಕಥಾರೂಪ ಪ್ರವಾಸ ಸಾಹಿತ್ಯ.

**ಆದರೆ ಸಾ.ಶಿ. ಮರುಳಯ್ಯನವರು ಪ್ರವಾಸ ಸಾಹಿತ್ಯದ ಉದ್ದೇಶವನ್ನು ಗಮನಿಸುತ್ತಾ**

**ಇದನ್ನು ಐದು ವಿಭಾಗಗಳಾಗಿ ವಿಂಗಡಿಸುತ್ತಾರೆ. ಅವುಗಳೆಂದರೆ:**

1. **ತೀರ್ಥಯಾತ್ರಾ ಪ್ರವಾಸ ಸಾಹಿತ್ಯ.**
2. **ಸಾಂಸ್ಕೃತಿಕ ಪ್ರವಾಸ ಸಾಹಿತ್ಯ.**
3. **ಶೈಕ್ಷಣಿಕ ಪ್ರವಾಸ ಸಾಹಿತ್ಯ.**
4. **ವ್ಯಾವಹಾರಿಕ ಪ್ರವಾಸ ಸಾಹಿತ್ಯ.**
5. **ಪ್ರವಾಸ ಪ್ರೇಮಿ ಪ್ರವಾಸ ಸಾಹಿತ್ಯ.**

ಹೀಗೆ ಅನೇಕ ವಿದ್ವಾಂಸರು ಬೇರೆ ಬೇರೆ ರೀತಿಯಲ್ಲಿ ಪ್ರವಾಸ ಸಾಹಿತ್ಯವನ್ನು ವಿಂಗಡಿಸಿದ್ದಾರೆ. ಡಾ. ವಿದ್ಯಾಶಂಕರ ಅವರು ಆರು ಬಗೆಯಾಗಿ ವಿಂಗಡಿಸಿದರೆ, ಎನ್. ಎಸ್. ತಾರಾನಾಥ ಅವರು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಈ ಪ್ರವಾಸ ಸಾಹಿತ್ಯಕ್ಕೆ ಇದೇ ರೂಪ ಇರಬೇಕೆಂಬ ನಿಯಮವಿಲ್ಲ. ಅದು ಗದ್ಯದಲ್ಲಿ ಇರಬಹುದು, ಇಲ್ಲವೆ ಪದ್ಯದಲ್ಲಿ ಇರಬಹುದು ಅಥವಾ ಗೋಕಾಕರ 'ಇಂದಿಲ್ಲ ನಾಳೆಯಂತೆ' ಕೃತಿಯಂತೆ ಆಧುನಿಕ ಚಂಪೂವಿನಲ್ಲಿ ಬೇಕಾದರೂ ಇರಬಹುದು.

**ಕನ್ನಡ ಪ್ರವಾಸ ಸಾಹಿತ್ಯದಲ್ಲಿನ ಕಾವ್ಯದ ಸ್ವರೂಪ:**

ಪ್ರವಾಸ ಎಂಬುದಕ್ಕೆ ಕುವೆಂಪು ಅವರು ಈ ರೀತಿಯಾಗಿ ಹೇಳುತ್ತಾರೆ: "ಮನುಷ್ಯನ ಆತ್ಮದಲ್ಲಿಯೇ ಯಾತ್ರೆಯ ಅವಶ್ಯಕತೆಗೆ ಒಂದು ಆಧಾರವಿರಬಹುದೇ? ಮನುಷ್ಯ ವಾಸ್ತವವಾಗಿಯೂ ಈ ಪ್ರಪಂಚದಲ್ಲಿ ಒಬ್ಬ ಪ್ರವಾಸಿ. ಅವನ ಜೀವನ ಸಮಸ್ತವೂ ಒಂದು ಪ್ರವಾಸ."

ಪ್ರೊ. ತಿ.ನಂ.ಶ್ರೀ ಅವರು ತಮ್ಮ ಅಭಿಪ್ರಾಯವನ್ನು ಬಸವಣ್ಣನವರ ಒಂದು ವಚನದ ದಾಟಿಯನ್ನು ಬಳಸಿಕೊಂಡು ಈ ರೀತಿಯಾಗಿ ಹೇಳಿದ್ದಾರೆ. ಇವರು ಪ್ರವಾಸಕ್ಕೆ ಯೌವನದ ದಿನಗಳೇ ಯೋಗ್ಯವೆಂದು ಹೇಳುತ್ತಾರೆ. ಪ್ರವಾಸಿಯಾಗಬೇಕೆನ್ನುವವನಿಗೆ ದೇಹಾರೋಗ್ಯ ಬೇಕು, ಜಂಘಾಬಲ ಬೇಕು, ಒಳಸೋರದ ಉತ್ಸಾಹವಿರಬೇಕು.

**ನರೆ ಕೆನ್ನೆಗೆ, ತೆರೆಗಲ್ಲಕೆ ಬಂದಡಸದ ಮುನ್ನ**
**ಕೀಳುಣಿಸಿನ, ಎದುರುಸಿರಿನ, ಚಳಿಶಕೆಗಳ ಚಿಂತೆ**
**ಮನವನಲ್ಲಾಡಿಸದ ಮುನ್ನ**
**ತಗುಣಿ ಸೊಳ್ಳೆ ಗುಂಪು ಗದ್ದಲಗಳ ಭೀತಿ**
**ರಕ್ತವನಾವರಿಸದ ಮುನ್ನ**
**ಮೈಯ ಕೆಚ್ಚು, ಕಾಲ ಕಸುವು ಬಗೆಯ ಹುಮ್ಮಸ್ಸು**
**ಒಪ್ಪವಳಿಯದ ಮುನ್ನ**
**ಮುಪ್ಪಿನ ಭಾರ ಹೆಗಲೇರದ ಮುನ್ನ**
**ಕಿವಿಗೊಡು ಓ ಪ್ರೇಕ್ಷಣ ರಸಿಕನೆ, ಪ್ರವಾಸದ ಕರೆಗೆ.**

ಪ್ರವಾಸ ಸಾಹಿತ್ಯದಲ್ಲಿ ಕಾವ್ಯ ಎಂಬುದು ಒಂದು ಮಾಹಿತಿ ಕೇಂದ್ರಿತವಾಗಿರದೆ,

ಭಿನ್ನ ರೀತಿಯಲ್ಲಿ ಭಾವಾನುಭವವನ್ನು ವ್ಯಕ್ತಪಡಿಸುವುದಾಗಿದೆ. ಯಾವುದೇ ವರದಿಯನ್ನು ನೀಡದೆ ಕಾವ್ಯಾತ್ಮಕ ಸಂವೇದನೆ ಮತ್ತು ಸೌಂದರ್ಯಾನುಭವವನ್ನು ನೀಡುವ ಒಂದು ಪ್ರಕಾರವಾಗಿದೆ. ವ್ಯಕ್ತಿಯೋರ್ವನು ಪಡೆದ ಸ್ಥಳದ ಅನುಭವವನ್ನು ಕಾವ್ಯದ ರೂಪದಲ್ಲಿ ನಿದರ್ಶಿಸುತ್ತದೆ. ಆ ಪ್ರಕೃತಿಯಲ್ಲಿ ಜೀವಿಸಿ ಸವಿದ ಅನುಭವಗಳನ್ನು ವರ್ಣನಾತ್ಮಕವಾಗಿ ನಿರೂಪಿಸುವ ಒಂದು ವಿಧಾನವನ್ನು ಒಳಗೊಂಡಿದೆ.

ಈ ಒಂದು ಕಾವ್ಯ ಪ್ರಕಾರದಲ್ಲಿ ಪ್ರಕೃತಿ ಮತ್ತು ಮಾನವನ ನಡುವೆ ಒಂದು ರೀತಿಯ ಸಂವಾದವೇ ನಡೆಯುತ್ತದೆ. ಪ್ರಕೃತಿಯಲ್ಲಿನ ಪರ್ವತ, ನದಿ, ಕಾಡು, ನಗರ ಇತ್ಯಾದಿ ಸ್ಥಳಗಳಲ್ಲಿ ಕಂಡ ದೃಶ್ಯಗಳನ್ನು ಲಾಲಿತ್ಯಮಯದ ಧಾಟಿಯಲ್ಲಿ ಹೊರಹೊಮ್ಮಿಸುತ್ತದೆ. ಕಾವ್ಯ ಎಂಬುದು ಕಾಲ ಮತ್ತು ಸ್ಥಳಗಳನ್ನು, ಅಂದರೆ ಭೂಗೋಳ, ಭೂಪ್ರದೇಶವನ್ನು ಹಾಗೂ ಇತಿಹಾಸದಲ್ಲಿನ ದೃಶ್ಯವನ್ನು ಕಾವ್ಯರೂಪದಲ್ಲಿ ವರ್ಣಿಸುವುದಾಗಿದೆ.

ಬರೀ ಆಹಾರ, ಮೋಜು, ನಿದ್ರೆಗಳೇ 'ಪ್ರವಾಸೀ ಅನುಭವ' ಅಲ್ಲ; ಅದು ಮನೆಯಲ್ಲೂ ಸಿಗುತ್ತದೆ. ನಿಮ್ಮ ಸಂಚಾರ ನಿಮ್ಮ ಅನುಭವಕ್ಕೆ ಬರಬೇಕು, ನಮ್ಮ ಸುತ್ತಲಿನ ಜಗತ್ತು ನಮಗೆ ಕಾಣಬೇಕು. ನಿಮ್ಮ ಯಾನದ ದಾರಿ ನಿಮ್ಮ ಪ್ರಜ್ಞೆಯಲ್ಲಿರಬೇಕು. ಹೊಸ ಪ್ರದೇಶ, ದೇಶ, ಜನರು, ಜೀವನ, ಊರುಗಳು, ಮರಗಿಡ, ಬೆಟ್ಟಗುಡ್ಡ, ನದಿಗಳು ಇವೆಲ್ಲ ಹತ್ತಿರದಿಂದ ನೋಡಲು ಸಿಗಬೇಕು. ಅಲ್ಲಿನ ಜೀವನ ನಿಮ್ಮ ಕಣ್ಣ ಮುಂದೆ ತೆರೆದುಕೊಳ್ಳಬೇಕು. ಈ ಎಲ್ಲಾ ಬದಲಾವಣೆಗಳ ಜೊತೆಗೆ ನಾವು ಒಬ್ಬರಾಗಿ ಬೆರೆಯಬೇಕು. ಹೊಸ ಜನರ ಜೊತೆ ಬೆರೆತು ಮಾತನಾಡಬೇಕು. ಜನರ ಒಡನಾಟ, ಅವರ ಮನೆಗಳು, ಅಂಗಡಿಗಳು, ಸಂತೆಗಳು, ಮಾರುಕಟ್ಟೆಗಳು, ಹಬ್ಬಗಳು, ಮೇಳಗಳು, ಧಾರ್ಮಿಕ ಸ್ಥಳಗಳು, ಸಾಮಾಜಿಕ ಕಾರ್ಯಕ್ರಮಗಳು, ಕಲೆಗಳು, ಜ್ಞಾನದ ತಾಣಗಳು, ಪ್ರಕೃತಿಯ ಸ್ವಾರಸ್ಯ – ಈ ಎಲ್ಲಾ ಸಂಗತಿಗಳು ಒಟ್ಟಾಗಿ ಪ್ರಯಾಣದ, ಪ್ರವಾಸದ ಗಾಢ ಅನುಭವವನ್ನು ನೀಡುತ್ತವೆ.

ಮಾಸ್ತಿಯವರ 'ಹಾಳೂರು' ಎಂಬ ಕವನವೂ ಒಂದು ರೀತಿಯ ಪ್ರವಾಸದ ಅನುಭವವನ್ನು ಕಾಣಬಹುದು. ದೇವಾಲಯದ ಗೋಡೆ ಗೋಡೆಗಳಲ್ಲಿನ ಮಹತ್ವವನ್ನು ಅವರು ಹೀಗೆ ಹೇಳುತ್ತಾರೆ:

**ಹಾಳೂರ ನೋಡು, ಹಾಳು ಗೋಡೆಗಳ**
**ಹಾಳಾದ ಹೊಲಮಡಿಯ, ಹಾಳು ಗುಡಿಯ**
**ಬಿಂದುವಿಗೆ ಕಳೆಯೆಲ್ಲ ತುಂಬಿರಲು ನೋಡಿ**
**ಚೆಂದುಮಾಮಾ ಬಾಬಾ ಎಂಬರಿಲ್ಲ.**

ಕಾವ್ಯಗಳಲ್ಲಿ ಮುಖ್ಯವಾಗಿ ರೂಪಕಗಳನ್ನು, ಉಪಮೆಗಳನ್ನು, ಹೋಲಿಕೆಗಳನ್ನು ಕಾಣಬಹುದು. ಇವುಗಳನ್ನು ನೀಡುವುದರಿಂದ ಭಾವನೆಗಳಿಗೆ ಸನಿಹ ಎಂದೆನಿಸುತ್ತದೆ ಹಾಗೂ ಬಹಳ ಬೇಗ ಮನಕ್ಕೆ ಮುಟ್ಟುತ್ತದೆ. ಭಾಷೆಯ ಬಳಕೆಯಲ್ಲಿಯೂ ಕೂಡ ಕಾವ್ಯಗಳು ಮನಮುಟ್ಟುವಂತಿರುತ್ತವೆ. ಭಾಷೆಯ ಬಳಕೆಯು ಅನುಭವವನ್ನು

ಚಿತ್ರಣದ ಮೂಲಕ ಕಣ್ಣಮುಂದೆ ತಂದಿಡುತ್ತದೆ. ಸರಳ ಭಾಷೆಯನ್ನು ಬಳಸಿ ಸಂವೇದನಾಶೀಲತೆಯನ್ನು ಮೆರೆಯುತ್ತದೆ. ಪದ ವಾಕ್ಯಗಳು ಲಯಬದ್ಧತೆಯಿಂದ ಕೂಡಿದ್ದು, ಕೆಲವೊಮ್ಮೆ ಸಂಗೀತದ ಧಾಟಿಯಲ್ಲಿಯೂ ಹೊರಹೊಮ್ಮುತ್ತವೆ.

**ಉದಾಹರಣೆಗೆ, ಕುವೆಂಪು ಅವರ ಪದ್ಯ:**

**ದೇವರು ರುಜು ಮಾಡಿದನು**
**ರಸವಶನಾಗುತ ಕವಿ ಅದ ನೋಡಿದನು....**

ಇದು ಕಾವ್ಯದ ಹಿನ್ನೆಲೆಯಲ್ಲಿ ಹಾಗೂ ಕುವೆಂಪು ಅವರು ಕಂಡ ಒಂದು ಪ್ರಕೃತಿಯ ಚಿತ್ರವನ್ನು ವರ್ಣಿಸುವ, ವಿವರಿಸುವ ಸಂದರ್ಭವಾಗಿದೆ. ಅವರ ಕವಿ ಮನಸ್ಸು, ಅನುಭವ ಎರಡರ ಸಮ್ಮಿಲನವೇ ಈ 'ದೇವರು ರುಜು ಮಾಡಿದನು'.

ಪ್ರವಾಸ ಸಾಹಿತ್ಯದಲ್ಲಿ ಕಾವ್ಯವು ಹೇಗೆ ಪ್ರಮುಖ ಪಾತ್ರವಹಿಸುತ್ತದೆ, ಹಾಗೂ ಕಾವ್ಯ ಪ್ರಕಾರವನ್ನೇ ಬಳಸಿ ಪ್ರವಾಸದ ಅನುಭವವನ್ನು ಅಭಿವ್ಯಕ್ತಗೊಳಿಸುವಲ್ಲಿ ಅನೇಕ ಕವಿಗಳು ಪ್ರಮುಖರಾಗುತ್ತಾರೆ. ಅವರುಗಳಲ್ಲಿ ಕೆಲವು ಕವಿಗಳನ್ನು ಇಲ್ಲಿ ಕಾಣಬಹುದು: ಕುವೆಂಪು, ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ, ನಿಸಾರ್ ಅಹಮದ್, ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶಮೂರ್ತಿ, ಕೆ.ಎಸ್. ನರಸಿಂಹಸ್ವಾಮಿ ಇತ್ಯಾದಿ.

ಕುವೆಂಪು ಅವರು ಹೆಚ್ಚು ಪ್ರವಾಸವನ್ನು ಕೈಗೊಳ್ಳದೇ ಇದ್ದರೂ, ಅವರು ಇದ್ದ ಸ್ಥಳದಲ್ಲಿಯೇ ಅವರು ಕಂಡಂತಹ ಪರಿಸರದ ದೃಶ್ಯಗಳನ್ನು ಕಾವ್ಯರೂಪದಲ್ಲಿ ಸೆರೆಹಿಡಿದಿದ್ದಾರೆ. ಅವರು ಮಲೆನಾಡಿನ ಆ ಸ್ಥಳವನ್ನೇ ಪ್ರಪಂಚವೆಂದು ಭಾವಿಸಿ, ಅಲ್ಲಿಯೇ ಕಂಡ ದೃಶ್ಯಗಳನ್ನು ಅನುಭವಿಸಿ ಕಾವ್ಯಗಳನ್ನು ಬರೆಯುತ್ತಾರೆ. ಮಲೆನಾಡಿನ ಆ ದೃಶ್ಯಗಳು ಅವರಿಗೆ ವಿಶೇಷವಾದ ಅನುಭವಗಳನ್ನು ಕೊಟ್ಟಿವೆ. ಅವರು ಕಂಡ ಮಲೆನಾಡಿನ ಸುತ್ತಮುತ್ತಲಿನ ಸೌಂದರ್ಯಯುತ ಚಿತ್ರಗಳನ್ನು ಮನದಲ್ಲಿ ಸವಿದು ಅದಕ್ಕೆ ಬರವಣಿಗೆಯ ರೂಪವನ್ನು ಕೊಟ್ಟು ಕಾವ್ಯವನ್ನು ರಚಿಸುತ್ತಾರೆ. ಪ್ರಕೃತಿ ಪ್ರವಾಸ ಕಾವ್ಯಕ್ಕೆ ಮುಖ್ಯವಾದ ಬರವಣಿಗೆಯಾಗಿ ಕುವೆಂಪು ಅವರನ್ನು ಕಾಣಬಹುದಾಗಿದೆ.

ಕವಿಯು ತನ್ನ ಕಲ್ಪನೆಯಲ್ಲಿಯೇ ಪರಿಸರವನ್ನು, ಪ್ರಕೃತಿಯನ್ನು ನೆನೆದು ಕಾವ್ಯದ ರೂಪದಲ್ಲಿ ಬರೆಯುತ್ತಾನೆ. ಸ್ಥಳವನ್ನು ಅಲ್ಲಿಗೆ ಹೋಗಿಯೇ ಅದರ ಬಗ್ಗೆ ಬರೆಯಬೇಕು ಎಂಬುದಿಲ್ಲ. ಒಂದು ಸುಂದರವಾದ ದೃಶ್ಯವನ್ನು ನೋಡಿದರೆ ಸಾಕು, ಅದನ್ನು ಆತ್ಮಾನುಭವಕ್ಕೆ ತೆಗೆದುಕೊಂಡು ಕಾವ್ಯ ರೂಪ ತಾಳುತ್ತದೆ. ಇದಕ್ಕೆ ಉದಾಹರಣೆಯಾಗಿ ಅನೇಕ ಕಾವ್ಯದ ಸಾಲುಗಳನ್ನು ಕಾಣಬಹುದಾಗಿದೆ. ಕುವೆಂಪು ಅವರ ಕಾವ್ಯಗಳಲ್ಲಿ ಬರುವ ಹಿಮಾಲಯ, ಪಥ, ನದಿ ಇವು ದೈಹಿಕ ಸ್ಥಳಗಳ ಬದಲಾಗಿ ಆತ್ಮಾನುಭವದ ಸಂಕೇತಗಳಾಗಿವೆ ಎನ್ನಬಹುದು.

**ಉದಾಹರಣೆಗೆ:**

**ಹಿಮವ ನೊಗೆಯಲಿ ಹೃದಯ ಹಾರಿತು,**
**ಮೌನವೇ ಇಲ್ಲಿ ಮಾತಾಡಿತು**

**ಪರ್ವತ ಶಿಖರಗಳ ಮೌನದಲ್ಲಿ**
**ನನ್ನೊಳಗಿನ ನಾನು ಕೇಳಿತು**
**ನದಿಯ ಹರಿವಿನಲಿ ಕಂಡೆ**
**ಕಾಲದ ನಿರಂತರ ಪಯಣ.**

ಹಿಮಾಲಯದ ಅಳಿಲು, ಉತ್ತರಾಯಣ ಪಥದಲ್ಲಿ ಕುವೆಂಪುರವರು ಕಂಡಿರದ ಪ್ರದೇಶಗಳ ಕುರಿತಾಗಿ ಆತ್ಮಾನುಭವದಿಂದ ಕಾವ್ಯ ಬರೆಯುತ್ತಾರೆ. ಪ್ರವಾಸ ಎಂದರೆ ದೂರದಲ್ಲಿ ಹೋಗಿ ಸ್ಥಳಗಳನ್ನು ನೋಡಿ ಬರುವುದಿಲ್ಲ, ಪ್ರವಾಸ ಎಂದರೆ ನನ್ನೊಳಗಿನ ಬೆಳಕಿನ ಹುಡುಕಾಟ ಎಂಬುದಾಗಿ ಹೇಳುತ್ತಾರೆ.

ಬೇಂದ್ರೆಯವರ ಕಾವ್ಯಗಳಲ್ಲಿಯೂ ಪ್ರವಾಸದ ಕಲ್ಪನೆಯನ್ನು ಕಾಣಬಹುದು. ಅವರ ಕಾವ್ಯಗಳಲ್ಲಿ ಪ್ರವಾಸ ಮಾಡದಿದ್ದರೂ ಅದರ ಕಲ್ಪನೆಯನ್ನು ಪದ್ಯಗಳಲ್ಲಿ ಹಿಡಿದಿದ್ದಾರೆ. ಲಯಬದ್ಧವಾದ, ಹಾಡುಗಾರಿಕೆಯ ಧಾಟಿಯಲ್ಲಿ ಪದ್ಯಗಳು ರಚನೆಯಾಗಿದ್ದು, ಭಾವಪೂರ್ಣವಾದ ಒಂದು ಮನೋಭಾವನೆಯನ್ನು ಕಾಣಬಹುದು. ಪ್ರಕೃತಿಯ ಸೊಬಗು ಮತ್ತು ಅದರ ಕಾಲ್ಪನಿಕತೆಯನ್ನು ಕಟ್ಟಿಕೊಟ್ಟಿದ್ದಾರೆ.

**ಹಾದಿಯಲಿ ಹಾದಿಯಲಿ ಮನಸು ಹಾಡು ಹಿಡಿಯಿತು.**
**ಗಾಳಿಯೊಡನೆ ಗೀತೆ ಹೊರಟಿತು ದಿಕ್ಕಿಲ್ಲದ ಪಯಣಕ್ಕೆ.**
**ಮುಗಿಲು ಮುಗಿಲು ದೂರ ಸರಿದು ನನ್ನ ಮನಸ್ಸು ಹಿಂಬಾಲಿಸಿತು.**
**ಕಾಲವೇ ದಾರಿ, ನಾನೇ ಸಂಚಾರಿ.**
**ಗರಿ ಕಟ್ಟಿಕೊಂಡ ಮನಸು ಗಗನ ತೊಡೆಯಲು ಹೊರಟಿತು.**
**ನೆಲೆ ಇಲ್ಲದ ಹಾರಾಟವೇ ನನ್ನ ನಿಜವಾದ ವಾಸ.**
**ತೂಗಾಡುವ ಜೀವನದಲ್ಲಿ ನಿಂತು ನೋಡುವ ಕ್ಷಣವಿಲ್ಲ.**

ಬೇಂದ್ರೆಯವರ ಹಲವು ಪದ್ಯಗಳು ಪ್ರವಾಸಕ್ಕೆ ಕುರಿತಾದ ಒಂದು ಕಲ್ಪನೆ ಮತ್ತು ವಿವರಣೆಯನ್ನು ನೀಡುತ್ತವೆ. ಸಂಚಾರಿ ಭಾವವನ್ನು ಸೂಚಿಸುತ್ತವೆ. ಹಾಗೆಯೇ ಮುಂದುವರಿದು ಯಾತ್ರೆಯ ಬಗ್ಗೆಯೂ ಕೂಡ ಮಾತನಾಡುತ್ತವೆ. ಜೀವನಯಾತ್ರೆಯೆಂಬುದು ಒಂದು ಪ್ರವಾಸವಿದ್ದಂತೆ ಎಂದು ಅನೇಕ ಸಂಕೇತಗಳನ್ನು ಬಳಸಿ ಪದ್ಯಗಳನ್ನು ಬರೆದಿದ್ದಾರೆ. ಇವರ ಪ್ರವಾಸ ಪದ್ಯಗಳಲ್ಲಿ ಕಂಡು ಬರುವ ಸಂಕೇತಗಳೆಂದರೆ – ಅವು ದಾರಿ, ಗಾಳಿ, ಹಕ್ಕಿ, ಮೋಡಗಳೇ ಆಗಿವೆ.

ಇದೇ ರೀತಿ ಇನ್ನು ಅನೇಕ ಕವಿಗಳು ತಮ್ಮ ಪ್ರವಾಸದ ವಿಶೇಷತೆಯನ್ನು ಕಾವ್ಯಗಳ ಮೂಲಕ ನಾದಮಯವಾಗಿ ವಿವರಿಸಿದ್ದಾರೆ. ಇದು ಸೌಂದರ್ಯದಿಂದ ಕೂಡಿದ್ದು, ಓದುಗರ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತದೆ. ಕಾಣದ ಸ್ಥಳವನ್ನು ಮನಸ್ಸಿನಲ್ಲಿಯೇ ಆನಂದಿಸಿ, ಆ ಸ್ಥಳದ ವಾಸ್ತವಿಕತೆಯನ್ನು ಕಣ್ಣ ಮುಂದೆ ತರುತ್ತದೆ.

**ಜಿ.ಎಸ್. ಶಿವರುದ್ರಪ್ಪ ಅವರ ಸಾಲುಗಳು:**

**ಕಾಣದ ಕಡಲಿಗೆ ಹಂಬಲಿಸಿದೆ ಮನ**
**ಕಾಣ ಬಲ್ಲೆನೆ ಒಂದು ದಿನ**

**ಕೂಡಬಲ್ಲೆನೆ ಒಂದು ದಿನ**
**ನಗರದ ಬೀದಿಗಳಲ್ಲೂ ನನ್ನ ಹಳ್ಳಿಯ ಹೆಜ್ಜೆ ಕೇಳಿತು.**
**ಚಂದ್ರಶೇಖರ ಕಂಬಾರರು:**
**ಮಲೆನಾಡಿನ ದಾರಿಯಲ್ಲಿ ನನ್ನ ಬೇರುಗಳು ನಡೆದವು.**

ಬೆಟ್ಟದ ಪುರದ ಎತ್ತರವಾದ ಬೆಟ್ಟವನ್ನು ನೋಡಿದ ಮಾಸ್ತಿ ಅವರು ಬೆಟ್ಟವನ್ನು ಕಂಡಾಗ ಕವಿಯ ಮನಸ್ಸು ಹೇಗೆ ಪುಳಕಿತವಾಗುತ್ತದೆ ಎಂಬುದನ್ನು ಈ ರೀತಿಯಾಗಿ ವರ್ಣಿಸಿದ್ದಾರೆ:

**ಅಂದಾ ಹೊತ್ತು**
**ನನ್ನ ನೆಳಲಲಿ ಬೆಳೆದು ಬಿಳುಗೊಡೆಯ ಹಿಡಿದೆತ್ತಿ**
**ನಾಡನೆಲ್ಲವ ವೀರತನದಿಂದ ಪೊರೆದಾಳಿ**
**ಹಗೆಯಾಗಿ ಬಂದವರ ಹೃದಯಗಳ ಹುಲು ಸೀಳಿ**
**ಬಾಳ್ದರಸರೇನಾದರು? ಹೋದರೆಲ್ಲೆತ್ತ?**
**ಎನುತ ನೋಡುವುದೊ ಗಿರಿ ತುದಿಗಾಲಿನಲಿ ನಿಂತು?**

## ಕನ್ನಡ ಪ್ರವಾಸ ಸಾಹಿತ್ಯದಲ್ಲಿನ ಕಥೆಯ ಸ್ವರೂಪ:

ಪ್ರವಾಸ ಸಾಹಿತ್ಯದಲ್ಲಿ ಕಾವ್ಯದ ಪ್ರಭಾವ ಹೇಗಿದೆಯೋ ಅದರಂತೆ ಕಥೆಗಳ ಪ್ರಭಾವವೂ ಅಪಾರವಿದೆ. ಕಥೆಗಳ ಮೂಲಕ ಪ್ರವಾಸದ ಅನುಭವಗಳನ್ನು ಓದುಗರಿಗೆ ಉಣಬಡಿಸುತ್ತದೆ. ಇದು ಒಂದು ರೀತಿಯ ಮಾಹಿತಿ ಪ್ರಧಾನವಾಗಿದ್ದರೂ, ಅದರೊಡಗೂಡಿ ಕಥೆಗಾರರಿಗಾದಂತಹ ಅನುಭವವನ್ನು ಒಂದೆಡೆ ಕೇಂದ್ರೀಕರಿಸುವಂತಹ ಒಂದು ಮುಖ್ಯ ಪ್ರಕಾರವಾಗಿದೆ. ಇಲ್ಲಿ ಅನೇಕ ರೀತಿಯಾದಂತಹ ಕಥೆಗಳನ್ನು ನೋಡಬಹುದು: ಒಂದು ಮಾಹಿತಿ ಪ್ರಧಾನವಾದ ಕಥೆಗಳು, ಎರಡು ಅನುಭವಾತ್ಮಕ ಕಥೆಗಳು. ಭೇಟಿಯಾದ ಕ್ಷೇತ್ರದ ಮಹತ್ವ ಮತ್ತು ಅಲ್ಲಿನ ಭೌಗೋಳಿಕ ಪರಿಸರ ಹಾಗೂ ಅಲ್ಲಿನ ದೇವಾಲಯಗಳ ಕುರಿತಾದಂತಹ ವಿಷಯಗಳನ್ನು ಇವು ವಿವರಿಸುತ್ತವೆ.

ಉದಾಹರಣೆಗೆ, 'ಶ್ರವಣಬೆಳ್ಗೊಳ ಕ್ಷೇತ್ರ ಚರಿತ್ರೆ' ಅಥವಾ 'ಶ್ರೀ ಬಾಹುಬಲಿ ವಿಜಯ' ಎಂಬ ಪ್ರವಾಸ ಸಾಹಿತ್ಯದಲ್ಲಿ ಅನೇಕ ರೀತಿಯ ವಿಷಯಗಳನ್ನು ತಿಳಿಸುತ್ತಾರೆ. ಶ್ರವಣಬೆಳ್ಗೊಳವು 'ದಕ್ಷಿಣ ಕಾಶಿ' ಎಂದು ಹೆಸರಾದಂತಿದೆ. ಈ ಒಂದು ಮೂರ್ತಿಯನ್ನು ನೋಡಲು ಬರುವ ಅನೇಕ ಪ್ರವಾಸಿಗಳು, ವಿದ್ವಾಂಸರು, ಕವಿಗಳ ಬಗ್ಗೆ ಮಾತನಾಡುತ್ತಾ, ಆ ಬಾಹುಬಲಿಯ ತೇಜೋಮಯ, ತಪೋಮಯ, ಮಂದಹಾಸ ಮುಖದ ಮೂರ್ತಿಯನ್ನು ನೋಡಿ ಮೂಕ ವಿಸ್ಮಿತರಾಗಿ ನಿಲ್ಲುವಂತಹ ಸನ್ನಿವೇಶವನ್ನು ತಿಳಿಸುತ್ತಾರೆ. ಸ್ಥಳ ನಾಮದ ಬಗ್ಗೆ ಇರುವ ಒಂದು ಕಥೆಯನ್ನು ವಿವರಿಸುತ್ತಾರೆ. ಅಲ್ಲಿಯೇ ದೊರೆತ ಸ್ಥಳೀಯ ಶಾಸನಗಳಿಂದ ಆ ಪ್ರದೇಶಕ್ಕೆ ಶ್ವೇತ ಸರೋವರ, ಧವಲ ಸರೋವರ, ಧವಲಸರಃ ಎಂಬ ಹೆಸರುಗಳಿರುವುದು ತಿಳಿಯುತ್ತದೆ.

ವಿ. ಸೀತಾರಾಮಯ್ಯ ಅವರ 'ಪಂಪಾಯಾತ್ರೆ' ಎಂಬ ಪ್ರವಾಸ ಕಥೆಯಲ್ಲಿ, ಅವರು ತಮ್ಮ 27ನೇ ವಯಸ್ಸಿನಲ್ಲಿ ಅವರಿಗಾದ ಹಂಪೆಯ ಪುಣ್ಯಕ್ಷೇತ್ರದ ಅನುಭವದ

ಬಗ್ಗೆ ಹೇಳುತ್ತಾರೆ. ಅಲ್ಲಿನ ಪರಿಸರ, ಕಮಲಾಪುರದಲ್ಲಿ ಉಳಿಯಬೇಕೆಂಬ ಬಯಕೆ, ಅಲ್ಲಿನ ಪ್ರಾಣಿಗಳ ಬಗ್ಗೆ ಹಾಗೂ ಅಲ್ಲಿನ ಜನರ ಧೈರ್ಯದ ಬಗ್ಗೆ ಮಾತನಾಡುತ್ತಾರೆ. ಗೊತ್ತಿಲ್ಲದ ಪ್ರದೇಶದಲ್ಲಿ ನಮ್ಮ ಕಷ್ಟಗಳಿಗೆ ಸ್ಪಂದಿಸುವ ಜನರು ಸಿಕ್ಕಾಗ ನಮಗೆ ಆಗುವ ಅನುಭವವೇ ಬೇರೆಯಿರುತ್ತದೆ. ಅವರ ಮನೆಗೆ ಹೋಗಿ ಅಲ್ಲಿನ ಯಜಮಾನರನ್ನು ನೋಡಿ ಅವರ ಮನೆಯ ಅಭ್ಯಾಸಗಳನ್ನು ತಿಳಿಯುವುದು ಒಂದು ವಿಶೇಷವೇ ಸರಿ. ಇಲ್ಲಿನ ಹಜಾರ ರಾಮಸ್ವಾಮಿ ದೇವಾಲಯದಲ್ಲಿ ಮಲಗಿದ ಒಂದು ಅನುಭವವನ್ನು ಹೇಳುತ್ತಾರೆ. ಈ ಪ್ರದೇಶದಲ್ಲಿನ ಕಾಫಿಯ ರುಚಿಯನ್ನು ಅವರು ದೇವತೆಗಳು ಕುಡಿಯುವ ಅಮೃತಕ್ಕೆ ಹೋಲಿಕೆ ಮಾಡಿ, ಅಲ್ಲಿನ ಜನರ ಜೀವನ ಕ್ರಮದ ಬಗ್ಗೆ ಮೈ ನವಿರೇಳುವಂತೆ ವಿವರಿಸಿದ್ದಾರೆ.

ಪುಣ್ಯಕ್ಷೇತ್ರಗಳನ್ನು ಹಾಗೂ ತೀರ್ಥಯಾತ್ರೆಗಳನ್ನು ಮಾಡದೆ, ರಾಹುಕಾಲ, ಗುಳಿಕಕಾಲಗಳನ್ನು ನಂಬದೆ, ಭಾರತದ ಬಹುಪಾಲು ದೇವಾಲಯಗಳನ್ನು ಸಂದರ್ಶಿಸಿ, ಅಲ್ಲಿನ ಶಿಲ್ಪಕಲೆ, ಕಲಾತ್ಮಕತೆ, ಪ್ರಕೃತಿಯ ಸೌಂದರ್ಯಗಳನ್ನು ವಿವರಿಸಿ ಹೇಳುವ ಕಥೆಗಾರರು ಇದ್ದಾರೆ. ಒಂದು ಪ್ರದೇಶಕ್ಕೆ ಪ್ರವಾಸ ಹೋದಾಗ ಅಲ್ಲಿನ ಜನ ಜೀವನ, ಅಲ್ಲಿ ನಡೆಯುವ ಕೆಲವು ಪದ್ಧತಿಗಳು, ಅಲ್ಲಿನ ಸಂಸ್ಕೃತಿಯನ್ನು ಕಾಣುತ್ತೇವೆ. ಇದನ್ನೇ ಕೇಂದ್ರವಾಗಿರಿಸಿಕೊಂಡು ಜಯದೇವಪ್ಪ ಜೈನಕೇರಿ ಅವರು ತಮ್ಮ 'ಪ್ರವಾಸ ಸಂಪದ'ದಲ್ಲಿ ಪ್ರವಾಸ ಮಾಡಿದ ಸ್ಥಳಗಳ ಹಿನ್ನೆಲೆ, ವಾಸ್ತುಶಿಲ್ಪ, ಇತಿಹಾಸ, ಪ್ರಕೃತಿ ಸೌಂದರ್ಯ, ಅಲ್ಲಿನ ಜನ ಜೀವನದ ವಾಸ್ತವ ಚಿತ್ರಣವನ್ನು ನೀಡುವಂತಹ ಪ್ರಯತ್ನ ಮಾಡಿದ್ದಾರೆ.

ಪರಿಸರದ ಬಗ್ಗೆ ವಿವರವಾಗಿ ಹೇಳುವ ಅಥವಾ ಪ್ರವಾಸದ ಅನುಭವಗಳನ್ನು ಹೇಳುವಲ್ಲಿ ಮೊದಲಿಗೆ ಕಣ್ಣಮುಂದೆ ಬರುವುದು ನದಿಗಳು, ನದಿಗಳ ದಡದಲ್ಲಿನ ಸುಂದರವಾದ ಪರಿಸರ. ದೊಡ್ಡ ದೊಡ್ಡ ಮರಗಳಿಂದ ಆವೃತವಾಗಿರುವ ಕಾಡುಗಳು, ಆ ಕಾಡುದಾರಿಗಳಲ್ಲಿ ಸಂಚರಿಸುವ ಒಂದು ಅನುಭವ ಮೈ ರೋಮಾಂಚನವೆನಿಸುತ್ತದೆ. ಅಲ್ಲಿ ಹೋಗಿ ಅನುಭವಿಸುವ ವ್ಯಕ್ತಿಗೆ ಸುಂದರ ಅನುಭವವಾಗುತ್ತದೆ. ಸೇತುವೆಗಳೂ ಕೂಡ ಕಂಡುಬರುತ್ತವೆ. ನದಿಗಳಲ್ಲಿ ಹಾಗೂ ಜಲಪಾತಗಳಲ್ಲಿ ಆಡುವುದೆಂದರೆ ಕೆಲವರಿಗೆ ಬಲು ಪ್ರೀತಿ, ಹಾಗೆಯೇ ವಿಹಾರ ಮಾಡುವುದು ಕೂಡ. ಉದಾಹರಣೆಗೆ ಮೈಸೂರಿನ ಪರಿಸರವನ್ನು ಕಾಣಬಹುದು. ಹಾಗೆಯೇ ಶಿವಮೊಗ್ಗ ಪ್ರದೇಶವನ್ನು, ನದಿ ತೀರದ, ಸಮುದ್ರ ತೀರದ ಪ್ರದೇಶಗಳು ಬಹಳ ಸೊಗಸಾಗಿ ಕಾಣುವುದಲ್ಲದೆ ಮನಸ್ಸಿಗೆ ಒಂದು ವಿಭಿನ್ನವಾದಂತಹ ಅನುಭವವನ್ನು ನೀಡುತ್ತವೆ.

ಪ್ರಕೃತಿಯಲ್ಲಿಯೇ ಜೀವನ ನಡೆಸಿದ ಮಹನೀಯರಲ್ಲಿ ತೇಜಸ್ವಿ ಅವರು ಒಬ್ಬರು. ಅವರು ಪರಿಸರದ ಬಗ್ಗೆ ಮಾಡಿರುವ ಪ್ರವಾಸ, ಸಂಶೋಧನೆ ಮುಖ್ಯವಾದ ಒಂದು ಸಾಧನೆ ಎನಿಸುತ್ತದೆ. ಅವರ ಬಹುಪಾಲು ಕೃತಿಗಳು ಪ್ರವಾಸದ, ಪ್ರಕೃತಿಯ ವಿಚಾರಗಳನ್ನೇ ಒಳಗೊಂಡಿವೆ. ಇವರು ಪ್ರಕೃತಿಯಲ್ಲಿ ಅನೇಕ ಪ್ರಾಣಿಗಳ ಬಗ್ಗೆ, ಸ್ಥಳಗಳ ಬಗ್ಗೆ ಪರಿಚಯಿಸುತ್ತಾರೆ. ಕಣ್ಣಿಗೆ ಕಾಣುವ ಪ್ರತಿಯೊಂದರ ಕುರಿತು

ಸಂಶೋಧನೆ ಮಾಡುತ್ತಾರೆ. ಅವರು ಪರಿಸರದ ಸೊಬಗನ್ನು ಅನುಭವಿಸಿ ಅನುಭವಕ್ಕೆ ಬಂದಿದ್ದನ್ನು ಓದುಗರ ಮುಂದಿಡುತ್ತಾರೆ. ಅವರ ಪರಿಸರದ ಪ್ರೇಮ ಅವರನ್ನು ಒಬ್ಬ ಪರಿಸರ ಪ್ರೇಮಿಯನ್ನಾಗಿ ಮಾಡಿದೆ. ಅವರ ಮೂಡಿಗೆರೆಯಲ್ಲಿನ ಜೀವನದ ಪ್ರಸಂಗಗಳನ್ನು ಓದಿದರೆ ನಮ್ಮ ಕಣ್ಣ ಮುಂದೆಯೇ ಮೂಡಿಗೆರೆ ಬಂದು ನಿಂತಿರುತ್ತದೆ.

ಪ್ರವಾಸ ಕೈಗೊಂಡಾಗ ಭಾಷೆಯಲ್ಲಿ ಅನೇಕ ಸಮಸ್ಯೆ, ಸವಾಲುಗಳನ್ನು ಎದುರಿಸಬೇಕಾಗುತ್ತದೆ. ನಮ್ಮ ಸ್ಥಳವನ್ನು ಹೊರತುಪಡಿಸಿ ಬೇರೆಡೆಗೆ ಹೋದಾಗ ಅಲ್ಲಿನ ಭಾಷೆ ಬಂದರೆ ಯಾವ ಸಮಸ್ಯೆಯೂ ಬರುವುದಿಲ್ಲ. ಅದೇ ಭಾಷೆ ಬರದಿದ್ದರೆ, ಅಲ್ಲಿನ ಸ್ಥಳಗಳ ಬಗ್ಗೆ ಅಪೂರ್ಣವಾಗಿ ತಿಳಿದಂತಾಗುತ್ತದೆ. ನಾವು ಅನೇಕ ಪ್ರವಾಸ ಕಥೆಗಳಲ್ಲಿ ಬೇರೆ ಬೇರೆ ಭಾಷೆಗಳ ಬಳಕೆಯನ್ನು ಕಾಣುತ್ತೇವೆ. ಏಕೆಂದರೆ ಅವರು ಹೇಳಿದ್ದನ್ನು ಯಥಾವತ್ತಾಗಿ ಹಾಗೆಯೇ ಬರೆದು ಬಿಡುತ್ತಾರೆ. ಉದಾಹರಣೆಗೆ: ವಣಕ್ಕಂ, ಪ್ರೇಯರ್, ಪಾಂಬನ್, ತಂಗಚ್ಚಿ ಮೇಡಂ, ತೀನ್ ದಿನ್ ಕೊ ತೀನ್ ಸೌ ರುಪಾಯಿ – ಹೀಗೆ ಅನೇಕ ಭಾಷೆಯ ಪದಗಳನ್ನು ಹಾಗೆಯೇ ಬರೆಯುವುದನ್ನು ಕಾಣುತ್ತೇವೆ.

ಕೆಲವರು ಪ್ರವಾಸ ಕಥೆಯನ್ನು ಬರೆಯುವಾಗ ಎಲ್ಲದರ ಪೂರ್ಣ ಮಾಹಿತಿಯನ್ನು ಕೊಡುತ್ತಾರೆ. ಅಂದರೆ ಪ್ರವಾಸಕ್ಕೆ ಯೋಜನೆ ಮಾಡಿರುವುದು, ಯಾವ ವಾಹನದಲ್ಲಿ ಎಲ್ಲಿಗೆ ಬಂದೆವು, ಆಗ ಸಮಯ ಎಷ್ಟಾಗಿತ್ತು, ಎಲ್ಲಿ ಉಳಿದೆವು, ಏನು ತಿಂದೆವು, ಟಿಕೆಟ್ ದರ ಎಷ್ಟು, ಯಾವ ಸಂಚಾರ ಮಾರ್ಗವನ್ನು ಅನುಸರಿಸಿದರು, ಏನೇನು ತಿಂದೆವು ಎಂಬ ಅನುಭವದ ಜೊತೆಗೆ ಮಾಹಿತಿಯನ್ನು ನೀಡುತ್ತಾರೆ. ಅವರು ಹೊರಟ ಸಮಯದಿಂದ ಹಿಡಿದು ಕೊನೆಗೆ ಅವರ ಮನೆಗೆ ಅವರು ತಲುಪುವರೆಗೂ ವಿವರಣೆಯನ್ನು ನೀಡುತ್ತಾರೆ. ಇದು ಮುಂದೆ ಪ್ರವಾಸ ಮಾಡುವವರಿಗೆ ಒಂದು ಮಾರ್ಗದರ್ಶಿಯ ಪುಸ್ತಕವಿದ್ದಂತಿರುತ್ತದೆ. ಹಾಗೆಯೇ ಮುಂದುವರಿದು, ಇದು ಯಾವ ಯಾವ ಮಾರ್ಗವಾಗಿ ಹೋದರೆ ಏನೆಲ್ಲಾ ಅನುಭವಗಳಾಗುತ್ತವೆ ಎಂದು ಮೊದಲೇ ತಿಳಿದು ಹೋಗುವಂತಹದ್ದಾಗಿರುತ್ತದೆ.

ಕರ್ನಾಟಕದಲ್ಲಿನ ತೀರ್ಥಕ್ಷೇತ್ರಗಳ ದರ್ಶನವನ್ನು ಬಹಳಷ್ಟು ಮಂದಿ ಮಾಡಿರುತ್ತಾರೆ. ಅನೇಕ ದೇವಾಲಯಗಳನ್ನು ಸುತ್ತಾಡಿ ದೇವರ ಆಶೀರ್ವಾದವನ್ನು ಪಡೆಯುತ್ತಾರೆ. ಕರ್ನಾಟಕದಲ್ಲಿನ ಅನೇಕ ತೀರ್ಥಕ್ಷೇತ್ರಗಳು ಕಂಡು ಬರುತ್ತವೆ. ಅದನ್ನು ವಿಭಾಗವಾಗಿ ವಿಂಗಡಿಸಿ ನೋಡುವುದಾದರೆ: ವೈಷ್ಣವ ಕ್ಷೇತ್ರಗಳು – ಈ ವೈಷ್ಣವ ಕ್ಷೇತ್ರಗಳಲ್ಲಿ ಸುಮಾರು 190ಕ್ಕೂ ಅಧಿಕ ದೇವಾಲಯಗಳನ್ನು ಕಾಣಬಹುದಾಗಿದೆ. ಹಾಗೆಯೇ ಶೈವ ಕ್ಷೇತ್ರಗಳಿಗೆ ಬಂದರೆ ಇಲ್ಲಿಯೂ ಕೂಡ ಸುಮಾರು 183ಕ್ಕೂ ಹೆಚ್ಚು ದೇವಾಲಯಗಳನ್ನೂ ಹಾಗೂ ಶಾಕ್ತ ಕ್ಷೇತ್ರಗಳಲ್ಲಿ 173 ದೇವಾಲಯಗಳನ್ನು ಕಾಣಬಹುದಾಗಿದೆ. ಇದನ್ನು ಹೊರತುಪಡಿಸಿ ಇತರ ಕ್ಷೇತ್ರಗಳ ಬಗ್ಗೆ ನೋಡುವುದಾದರೆ, 189ಕ್ಕೂ ಹೆಚ್ಚು ದೇವಾಲಯಗಳ ಪಟ್ಟಿ ಇದೆ. ಹೀಗೆ ತೀರ್ಥಯಾತ್ರೆ ಮಾಡುವವರ ಸಂಖ್ಯೆಯ ಜೊತೆಗೆ ತೀರ್ಥಕ್ಷೇತ್ರಗಳ ಪಟ್ಟಿಯೂ ಅಗಣಿತವಾಗಿ ಬೆಳೆಯುತ್ತಾ ಹೋಗುತ್ತಿದೆ.

ಒಂದೊಂದು ದೇವಾಲಯಗಳು ಒಂದೊಂದು ವಿಶೇಷತೆಯನ್ನು ಪಡೆದುಕೊಂಡಿದ್ದು, ಅದರ ಹಿಂದಿನ ಇತಿಹಾಸವನ್ನು ವಿವರಿಸುತ್ತಾರೆ. ಹುಲಿಗನಮರಡಿ ಪ್ರದೇಶಕ್ಕೆ ದಕ್ಷಿಣ ಶೇಷಾದ್ರಿ, ವ್ಯಾಘ್ರಾದ್ರಿ ಎಂದು ಕರೆಯುತ್ತಾರೆ. ಇನ್ನು ಗೋವಿನಾಕಾರದಲ್ಲಿರುವ ಗೋಪಾಲಸ್ವಾಮಿ ಬೆಟ್ಟವನ್ನು ಗೋವರ್ಧನಗಿರಿ ಎಂದು ಕರೆಯುವುದರ ಜೊತೆಗೆ ಕಮಲಾಚಲ, ಕಾಮಾದ್ರಿ, ಕಂಜಗಿರಿ ಎಂತಲೂ ಕರೆಯುವುದುಂಟು. ಅಗ್ರಹಾರ ದೇವಾಲಯಗಳನ್ನು ಕಾಣಬಹುದು. ಚುಂಚನಕಟ್ಟೆಯನ್ನು ಸಾಲಿಗ್ರಾಮವೆಂತಲೂ ಕರೆಯುತ್ತಾರೆ. ನದಿಗಳ ದಡಗಳಲ್ಲಿಯೇ ಅನೇಕ ದೇವಾಲಯಗಳು ನೆಲೆಯೂರಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಒಂದೊಂದು ಪ್ರದೇಶದಲ್ಲಿಯೂ ಒಂದೊಂದು ದೇವಾಲಯಗಳು ಪ್ರಮುಖವೆನಿಸಿ, ಹೆಸರುವಾಸಿಯಾಗಿರುವುದರ ಒಂದು ಸುಂದರವಾದ ಮಾಹಿತಿಯನ್ನು ಈ ಪ್ರವಾಸ ಕಥನಗಳು ತಿಳಿಸುತ್ತವೆ.

ಹೀಗೆ ಪ್ರವಾಸ ಸಾಹಿತ್ಯವು ಕಾವ್ಯ ಮತ್ತು ಕಥೆಗಳ ರೂಪದಲ್ಲಿ ಹೊರಹೊಮ್ಮಿದ್ದು, ಅದು ದೇಶ, ವಿದೇಶಗಳ ಪ್ರವಾಸದ ಅನುಭವಗಳನ್ನು ಒಳಗೊಂಡ ಮೊತ್ತವೇ ಆಗಿರುತ್ತದೆ. ಒಂದು ಸ್ಥಳಕ್ಕೆ ಅಥವಾ ಪ್ರದೇಶಕ್ಕೆ ಹೋಗಬೇಕಾದರೆ ಏನೆಲ್ಲ ಸಮಸ್ಯೆಗಳು ಬರಬಹುದು, ಹಾಗೆಯೇ ಹೇಗೆ ಪ್ರವಾಸವನ್ನು ಪೂರ್ಣಗೊಳಿಸಿದೆವು ಎಂಬುದು ಗಮನಾರ್ಹ. ಇದರ ನಡುವೆ ನಾವು ಅನುಭವಿಸಿದ ಅನುಭವಕ್ಕೆ ಯಾವುದೇ ರೀತಿಯ ಬೆಲೆ ಕಟ್ಟಲಾಗದು. ಒಂದು ಪ್ರದೇಶವನ್ನು ಬಿಟ್ಟು ಇನ್ನೊಂದು ಪ್ರದೇಶಕ್ಕೆ ಹೋಗಿ ಅಲ್ಲಿನ ಜನರ ಜೀವನ, ಪರಿಸರ, ಸಂಸ್ಕೃತಿ, ಭಾಷೆ, ನಂಬಿಕೆ, ದೇವಾಲಯಗಳು, ಆಚರಣೆಗಳ ಬಗ್ಗೆ ತಿಳಿಯುವುದು ಒಂದು ಮಹತ್ವದ ಅನುಭವವನ್ನು ಒಳಗೊಂಡಿರುತ್ತದೆ. ನಮ್ಮದಲ್ಲದ ಊರಿನಲ್ಲಿ, ನಮ್ಮವರಲ್ಲದ ಜನರ ಮಧ್ಯೆಯಲ್ಲಿ, ನಮ್ಮದಲ್ಲದ ಒಂದು ಪರಿಸರದ ಬಗ್ಗೆ ತಿಳಿಯುವುದು ಮನಸ್ಸಿಗೆ ಆಹ್ಲಾದವನ್ನು ತರುತ್ತದೆ.

## ಪರಾಮರ್ಶನ ಗ್ರಂಥಗಳು:

1. ಲತಾ ಗುತ್ತಿ, ಪ್ರವಾಸ ಸಾಹಿತ್ಯ: ವಿಶ್ವ ಸಂಸ್ಕೃತಿಗಳು, ಬೆಂಗಳೂರು: ಸಚಿನ್ ಪಬ್ಲಿಷರ್ಸ್.
2. ದೇ.ಜ.ಗೌ., (2007), ಕುವೆಂಪು ದರ್ಶನ (ಸಂಪುಟ–2), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಶಾಂತರಾಜಯ್ಯ ವೈ.ಜಿ., (1967), ಶ್ರವಣಬೆಳ್ಗೊಳ ಕ್ಷೇತ್ರ ಚರಿತ್ರೆ ಅಥವಾ ಶ್ರೀ ಬಾಹುಬಲಿ ವಿಜಯ, ಬೆಂಗಳೂರು: ಸುದರ್ಶನ್ ಪ್ರೆಸ್.
4. ಸೀತಾರಾಮಯ್ಯ ವಿ., ಪಂಪಾಯಾತ್ರೆ, ಬೆಂಗಳೂರು: ಜಿ. ಕಲ್ಲಯ್ಯ ಅಂಡ್ ಸನ್ಸ್.
5. ಜಯದೇವಪ್ಪ ಜೈನಕೇರಿ, (2006), ಪ್ರವಾಸ ಸಂಪದ, ಶಿವಮೊಗ್ಗ: ಶಾಂತಲಾ ಪ್ರಕಾಶನ.
6. ಅನಂತರಾಮು ಕೆ., (1982), ಸಕ್ಕರೆಯ ಸೀಮೆ ಮಂಡ್ಯಜಿಲ್ಲೆಯ ಪ್ರವಾಸ ಕಥನ, ಮೈಸೂರು: ಅನಂತ ಪ್ರಕಾಶನ.
7. ಆಗುಂಬೆ ಎಸ್. ನಟರಾಜ್, (2002), ಯಾತ್ರಾವಳಿ, ಬೆಂಗಳೂರು: ಹಂಸ ಪ್ರಕಾಶನ.
8. ಲಕ್ಷ್ಮಣ ಮೂರ್ತಿ ಕೆ.ವಿ., (2022), ಶ್ರೀಮಾತಾ ವೈಷ್ಣೋದೇವಿ ...ತಾಯಿಯ ಕರೆ, ಬೆಂಗಳೂರು: ಸ್ನೇಹ ಬುಕ್ ಹೌಸ್.
9. ವೆಂಕಟೇಶ್ ಎಸ್., (2004), ಮಾನಸ ಸರೋವರ (ಪ್ರವಾಸ ಕಥನ), ಬೆಂಗಳೂರು: ಪಾಂಚಜನ್ಯ ಪಬ್ಲಿಕೇಷನ್ಸ್.
10. ರಘೋತ್ತಮ ತೀರ್ಥ, (2010), ಕರ್ನಾಟಕ ತೀರ್ಥಕ್ಷೇತ್ರ ದರ್ಶನ, ಮೈಸೂರು: ಶ್ರೀಮತಿ ಭಾರತೀಬಾಯಿ ಪ್ರಕಾಶನ.
11. ಕುಲಕರ್ಣಿ ಎಸ್.ಎಲ್., (2001), ಭಾರತ ದರ್ಶನ, ಬಿಜಾಪುರ: ಲೀಲಾ ಪಬ್ಲಿಕೇಷನ್ಸ್.
12. ಮಾವಿನಕೆರೆ ರಂಗನಾಥನ್ (ಸಂ), (2010), ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ (ಸಂಪುಟ–1).
13. ಜೀವಿ ಕುಲಕರ್ಣಿ, (2010), ಬೇಂದ್ರೆ ಸಮಗ್ರ ಕಾವ್ಯ ದರ್ಶನ, ಹುಬ್ಬಳ್ಳಿ: ಪುರೋಗಾಮಿ ಸಾಹಿತ್ಯ ಪ್ರಕಾಶನ.
14. ಕರ್ಮವೀರ ವಾರಪತ್ರಿಕೆ, (25 ಜನವರಿ 2026), ಸಂಪುಟ: 83, ಸಂಚಿಕೆ: 18, ಹುಬ್ಬಳ್ಳಿ: ಲೋಕಶಿಕ್ಷಣ ಟ್ರಸ್ಟ್.